ಶ್ರೀ ಜೆ. ಹೆಚ್. ಪಟೇಲ್.—ಸಂಯುಕ್ತ ಯೋಜನೆ ಮಾಡುವುದಕ್ಕೆ ನಾವು ಅವರನ್ನು ಕೇಳಿದ್ದೇವೆ. ನಮ್ಮ ರಾಜ್ಯದ ಹಿತದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಿದ್ದೇವೆ. ಆದರೆ ಹೊಗೆನಕಲ್ ಯೋಜನೆ ತಮಿಳುನಾಡಿನ ವ್ಯಾಪ್ತಿಯಲ್ಲಿ ಬರುತ್ತದೆ. ಮೇಕೆದಾಟು ಯೋಜನೆ ಕರ್ನಾಟಕ ರಾಜ್ಯದಲ್ಲಿ ಬರುತ್ತದೆ. ಈ ಎರಡೂ ಯೋಜನೆಗಳನ್ನು ಮಾಡಿದರೆ ನಮಗೆ ವಿದ್ಯುಚ್ಛಕ್ತಿ ಹಕ್ಕು ಬರುತ್ತದೆ. ಆಗ ಅವರು ನೀರನ್ನು ತಮ್ಮ ಬೆಳೆಗೆ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಆದರೆ ನಮ್ಮ ರಾಜ್ಯಕ್ಕೂ ತಮಿಳುನಾಡಿಗೂ ನೀರಿನ ಹಂಚಿಕೆಯಲ್ಲಿ ವಿವಾದವಿರುವುದರಿಂದ ಇದು ಇನ್ನೂ ಇತ್ಯರ್ಥವಾಗಿಲ್ಲ. ಈ ಬಗ್ಗೆ ನಾವು ಕೇಂದ್ರ ಸರ್ಕಾರವನ್ನು ಸಹ ಒತ್ತಾಯಿಸುತ್ತಿದ್ದೇವೆ. ಇದುವರೆಗೆ ಕೇಂದ್ರ ಸರ್ಕಾರದಿಂದ ನಮಗೆ ಯಾವುದೇ ರೀತಿಯ ಉತ್ತರ ಬಂದಿಲ್ಲ.

ಶ್ರೀ ಶಿವಲಿಂಗೇಗೌಡ.—ಮೇಕೆದಾಟು ಯೋಜನೆಯ ಸರ್ವೆ ಕಾರ್ಯ ಮುಗಿದಿದೆ ಎಂದು ಹೇಳಿದ್ದೀರಿ, ಅಂದ ಮೇಲೆ ಕೆಲಸ ಪ್ರಾರಂಭಿಸಬಹುದಿತ್ತು, ಕೆಲಸ ಪ್ರಾರಂಭಿಸಲು ತಮಿಳುನಾಡು ಸರ್ಕಾರದವರಿಂದ ಏನಾದರು ಅಡ್ಡಿ ಇದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ನೀರು ಬಳಸುವುದಕ್ಕೋಸ್ಕರ ಮಾತ್ರ ಅಡ್ಡಿ ಇದೆ. ನಾವು ಸರ್ವೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಕೇಂದ್ರದವರು ಅನುಮತಿ ಕೊಟ್ಟರೆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ.

ರಾಜ್ಯದಲ್ಲಿ ಕೈಮಗ್ಗದ ಕೈಗಾರಿಕಾ ಅಭಿವೃದ್ಧಿ ಬಗ್ಗೆ

೧೮೫ (೪೫೧) ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ) ಮಾನ್ಯ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕೈಮಗ್ಗಕ್ಕೆ ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸುವ ಬಗ್ಗೆ ಸರ್ಕಾರದವರು ನಿರ್ಧರಿಸಿದ್ದಾರೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ?

ಇ) ಕೈಮಗ್ಗದ ಅಭಿವೃದ್ಧಿಗೆ ರಾಜ್ಯ ಸರ್ಕಾರದವರು ಕೈಗೊಂಡಿರುವ ಪ್ರೋತ್ಸಾಹಕ ಕ್ರಮಗಳೇನು ?

ಈ) ದಿಶೆಯಲ್ಲಿ ವಿಶೇಷ ಯೋಜನೆಯನ್ನೇನಾದರೂ ಯೋಜಿಸಲಾಗಿದೆಯೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇಲ್ಲ, ಈ ವಿಷಯ ಇನ್ನೂ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಸರ್ಕಾರವು ಈ ಕೆಳಕಂಡ ವಿವಿಧ ಪ್ರವರ್ತನಾ ಯೋಜನೆಗಳನ್ನು ಕೈ ಕೊಂಡಿದೆ:—

೧) ನೇಕಾರರ ವಸತಿ ಯೋಜನೆ.
೨) ಸಾಮೂಹಿಕ ನೇಯ್ಗೆ ಕೇಂದ್ರಗಳ ಸ್ಥಾಪನೆ.
೩) ಬಣ್ಣದ ಮನೆ ಯೋಜನೆ.
೪) ಷೇರು ಸಾಲ ಮತ್ತು ಅನುದಾನ ನೀಡಿಕೆ.
೫) ಕೈಮಗ್ಗದ ಬಟ್ಟೆ ಮೇಲಿನ ಸೋಡಿ ನೀಡಿಕೆ.
೬) ಸುಧಾರಿತ ಮಗ್ಗಗಳ ಅನುದಾನ ಮತ್ತು ಸಾಲ ನೀಡಿಕೆ.
೭) ನೇಕಾರರ ಮಿತವ್ಯಯ ನಿಧಿ ಯೋಜನೆ.
೮) ಜನತಾ ಬಟ್ಟೆಗಳ ಮೇಲೆ ಅನುದಾನ ನೀಡಿಕೆ.
೯) ನೇಕಾರರಿಗೆ ತರಬೇತಿ ಸೌಲಭ್ಯ ನೀಡಿಕೆ.
೧೦) ನೇಕಾರರಿಗೆ ಪ್ರವಾಸ ಯೋಜನೆ.
೧೧) ಹಿಬ್ಬಂದಿ ವೆಚ್ಚದ ಅನುದಾನ.
೧೨) ನೂಲು ವಿತರಣೆ.
೧೩) ಸೀರೆ ಮತ್ತು ಪಂಚೆಗಳ ವಿತರಣೆ ಯೋಜನೆ.

ಕೌಶಲ್ಯ ಅಭಿವೃದ್ಧಿ ಉತ್ಪಾದನಾ ಘಟಕದ ಏರಿಕೆ ಮತ್ತು ನೇಯ್ಗೆಯ ವಿನ್ಯಾಸದಲ್ಲಿ ಉನ್ನತಿಯನ್ನು ಹೊಂದಲು ಕ್ರಮಕೈಗೊಳ್ಳಲಾಗಿದೆ.

ಈ) ಹೌದು, ತೀವ್ರ ಕೈಮಗ್ಗದ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ.

(ಉಪ ಪ್ರಶ್ನೆಗಳನ್ನು ಕೇಳಲಿಲ್ಲ)

ರಾಜ್ಯದಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಬಗ್ಗೆ

೧೮೬(೪೮೬) ಶ್ರೀ ಎಂ ಎಸ್. ಕೃಷ್ಣನ್ (ರಾಜಾಜಿನಗರ).—ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿ ಕೈಗಾರಿಕಾ ಕಾಯಿಲೆಯ ಬಗ್ಗೆ ಗಮನ ಹರಿಸಿ ಸೂಕ್ತ ಪರಿಹಾರ ನೀಡಲು ರಾಜ್ಯಮಟ್ಟದ ಸಮಿತಿ ಏನಾದರೂ ಇದೆಯೆ?

ಆ) ಹಾಗಿದ್ದಲ್ಲಿ, ಈ ಸಮಿತಿಯ ಸದಸ್ಯರು ಯಾರು ಯಾರು ?

ಇ) ಈ ಸಮಿತಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ಬಾರಿ ಸೇರಿದೆ ಮತ್ತು ಅದರ ಮೂಲ ಶಿಫಾರಸ್ಸುಗಳೇನು?

ಈ) ಈ ಸಮಿತಿಯ ವರದಿಗಳನ್ನು ಸರ್ಕಾರದವರು ಒಪ್ಪಿದ್ದಾರೆಯೇ; ಯಾವ ಶಿಫಾರಸ್ಸುಗಳನ್ನು ಒಪ್ಪಲಾಗಿದೆ ?

ಉ) ಸದರಿ ಶಿಫಾರಸ್ಸುಗಳನ್ನು ಕಾರ್ಯಗತ ಮಾಡಿದೆಯೇ, ಆದರ ಪರಿಣಾಮವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಇದೆ.

ಆ) ಪಟ್ಟಿಯನ್ನು ಲಗತ್ತಿಸಲಾಗಿದೆ.

ಇ) ಸಮಿತಿಯು ೧೯೬೬ರ ಅಕ್ಟೋಬರ್ ತಿಂಗಳಿನಲ್ಲಿ ರಚನೆಯಾಗಿದ್ದು ದಿನಾಂಕ ೫-೧೧-೧೯೬೭ ರಂದು ಮೊದಲ ಬಾರಿಗೆ ಔಪಚಾರಿಕ ಸಭೆ ಸೇರಿತ್ತು. ಇದು ಆರಂಭದ ಸಭೆಯಾದ್ದರಿಂದ ಯಾವ ಗಣನೀಯ ಶಿಫಾರಸ್ಸುಗಳನ್ನು ಮಾಡಿಲ್ಲ.

ಈ) ಮೇಲಿನ ಸಂದರ್ಭದಲ್ಲಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ

ಉ) ಮೇಲಿನ ಸಂದರ್ಭದಲ್ಲಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.